# ಮೈಸೂರು ವಿಶ್ವವಿದ್ಯಾನಿಲಯ

## ಪೂರಕ ಕಾರ್ಯಸೂಚಿ–2

## "ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆ"

**ದಿನಾಂಕ : 27–03–2023, ಸೋಮವಾರ**

**ಪೂರ್ವಾಹ್ನ : 11–30 ಗಂಟೆಗೆ**

❖

**ಸ್ಥಳ : ಸಿಂಡಿಕೇಟ್ ಸಭಾಂಗಣ**

**ಕ್ರಾಫರ್ಡ್ ಭವನ, ಮೈಸೂರು ವಿ.ವಿ.**

**ಮೈಸೂರು**

***********

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:27-03-2023ರ ಸೋಮವಾರ, ಪೂರ್ವಾಹ್ನ 11-30 ಗಂಟೆಗೆ ನಡೆಯಲಿರುವ "ಎರಡನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯಲ್ಲಿ ಮಂಡಿಸಲಿರುವ ವಿಷಯಗಳು.

## ಪೂರಕ ಕಾರ್ಯಸೂಚಿ-2

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ | ಪುಟ ಸಂಖ್ಯೆ ಮತ್ತು ಅಡಕ |
|---|---|---|
| 2023/2.22 ರಿಂದ 2023/2.32ರವರೆಗೆ | ದಿನಾಂಕ : 24-03-2023ರ "ಎರಡನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ "ಪೂರಕ ಕಾರ್ಯಸೂಚಿ-1"ರಲ್ಲಿರುವಂತೆ. | 173-295 |
| ಸಾಮಾನ್ಯ ಸಭೆ 2023/2.33 | ಮೈಸೂರು ವಿಶ್ವವಿದ್ಯಾನಿಲಯದ ಕುಕ್ಕರಹಳ್ಳಿ ಕೆರೆ ಮೀನು ಪಾಶುವಾರು ಗುತ್ತಿಗೆ ಹಕ್ಕನ್ನು ನೀಡುವ ಬಗ್ಗೆ. | 296 |

ದಿನಾಂಕ : 27-03-2023

ಸ್ಥಳ : ಮೈಸೂರು

ಕುಲಸಚಿವ

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು

Subject No. 2023/233



**ಕುಕ್ಕರಹಳ್ಳಿ ಕೆರೆಯ ಮೀನು ಪಾಶುವಾರು ಗುತ್ತಿಗೆ ಹಕ್ಕನ್ನು ನೀಡುವ ಬಗ್ಗೆ.**

ಮೈಸೂರು ವಿಶ್ವವಿದ್ಯಾನಿಲಯದ ಕುಕ್ಕರಹಳ್ಳಿ ಕೆರೆ ಮೀನು ಪಾಶುವಾರು ಗುತ್ತಿಗೆ ಹಕ್ಕನ್ನು ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರು ಇವರಿಗೆ ಈ ಕೆಳಕಂಡ ಅವಧಿಗಳಲ್ಲಿ ಗುತ್ತಿಗೆ ನೀಡಲಾಗಿದೆ.

| ಕ್ರ ಸಂ | ಆದೇಶಗಳ ದಿನಾಂಕ | ಅವಧಿ |
|---|---|---|
| 1. | ವಿ.ವಿ.ಆದೇಶ ಸಂಖ್ಯೆ:ಜಿಎಲ್.6:194:97–98 ದಿನಾಂಕ 05.02.1998 | ದಿನಾಂಕ 01.02.1998 ರಿಂದ 31.01.1999 ರವರೆಗೆ ಒಂದು ವರ್ಷ ಅವಧಿಗೆ |
| 2. | ವಿ.ವಿ.ಆದೇಶ ಸಂಖ್ಯೆ:ಜಿಎಲ್.6:194:97–98 ದಿನಾಂಕ 05.05.2001 | ದಿನಾಂಕ 01.01.2001 ರಿಂದ 31.12.2005 ರವರೆಗೆ |
| 3. | ವಿ.ವಿ.ಆದೇಶ ಸಂಖ್ಯೆ:ಜಿಎಲ್.6:194:97–98 ದಿನಾಂಕ 29.09.2005 | ದಿನಾಂಕ 01.01.2006 ರಿಂದ 31.12.2008 ರವರೆಗೆ ಮೂರು ವರ್ಷ ಅವಧಿಗೆ |
| 4. | ವಿ.ವಿ.ಆದೇಶ ಸಂಖ್ಯೆ:ಜಿಎಲ್.6:194:97–98 ದಿನಾಂಕ 06.01.2006 | ದಿನಾಂಕ 01.01.2006 ರಿಂದ 30.06.2011 ವಿಸ್ತರಿಸಲಾಗಿದೆ. |
| 5. | ವಿ.ವಿ.ಆದೇಶ ಸಂಖ್ಯೆ:ಜಿಎಲ್.6:194:97–98 ದಿನಾಂಕ 14.06.2011 | 01.07.2011 ರಿಂದ 30.06.2014ರವರೆಗೆ 03 ವರ್ಷ ಅವಧಿಗೆ |
| 6. | ವಿ.ವಿ.ಆದೇಶ ಸಂಖ್ಯೆ:ಜಿಎಲ್.6:194:97–98 ದಿನಾಂಕ 13.08.20214 | 01.07.2014 ರಿಂದ 30.06.2019 ರವರೆಗೆ 05 ವರ್ಷ ಅವಧಿಗೆ |

ವಿ.ವಿ ಆದೇಶ ಸಂಖ್ಯೆ:ಜಿಎಲ್6/194/1997–98 ದಿನಾಂಕ 04.05.2019ರಂತೆ ದಿನಾಂಕ 31.01.2019ರಂದು ಜರುಗಿದ ಸಿಂಡಿಕೇಟ್ ತೀರ್ಮಾನ ಹಾಗೂ ಕುಲಪತಿಗಳ ಅನುಮೋದನೆ ಮೇರೆಗೆ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರು ಇವರ ಮೀನುಗಾರಿಕೆ ಪಾಶುವಾರು ಗುತ್ತಿಗೆಯನ್ನು ಅನೂರ್ಜಿತಗೊಳಿಸಿದ್ದ ಆದೇಶವನ್ನು ಹಿಂಪಡೆದು ರೂ.7,35,382/–ಗಳನ್ನು ಪಾವತಿಸುವ ಷರತ್ತಿಗೊಳಪಟ್ಟು ದಿನಾಂಕ 01.07.2019ರಿಂದ ದಿನಾಂಕ 30.06.2020ರವರೆಗೆ 06 ತಿಂಗಳ ಅವಧಿಗೆ ಮೀನು ಪಾಶುವಾರು ಮಾಡಲು ಅನುಮತಿ ನೀಡಲಾಯಿತು. ಆದರೆ. ಸದರಿಯವರು ಗುತ್ತಿಗೆ ಆದೇಶವನ್ನು ಪಡೆಯದೆ ಮೀನು ಪಾಶುವಾರು ಕಾರ್ಯವನ್ನು ಕೈಗೊಂಡಿರುವುದಿಲ್ಲ.

ತದನಂತರದಲ್ಲಿ ದಿನಾಂಕ 3–2–2023ರಂದು ಮತ್ತು ದಿನಾಂಕ 6–3–2023ರಂದು ನಡೆದ ಸಿಂಡಿಕೇಟ್ ಸಭೆಗಳಲ್ಲಿ ಕ್ರಮವಾಗಿ ಕಾನೂನು ಮೊರೆ ಹೋಗಿರುವುದರ ಬಗ್ಗೆ ಖಾತರಿಪಡಿಸಿಕೊಂಡು ಕ್ರಮಕೈಗೊಳ್ಳಲು ಹಾಗೂ ಮತ್ತೊಮ್ಮೆ ಕಾನೂನು ಅಭಿಪ್ರಾಯ ಪಡೆದು ನಿಯಮಾನುಸಾರ ಕ್ರಮಕೈಗೊಳ್ಳಲು ನಿರ್ಣಯಿಸಿರುವುದರಿಂದ ಕಾನೂನು ಅಭಿಪ್ರಾಯಕ್ಕಾಗಿ ಕಡತ ಮಂಡಿಸಲಾಗಿದೆ.

ಮೇಲಿನ ಸಂಕ್ಷಿಪ್ತ ಅಂಶಗಳನ್ನು ಸಿಂಡಿಕೇಟ್‌ನ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಮಂಡಿಸಲಾಗಿದೆ.